## **ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: 40 ವರ್ಷ ಮೀರಿದ ರಾಜ್ಯ ಸರ್ಕಾರಿ ನೌಕರರಿಗೆ ವಾರ್ಷಿಕ ವೈದ್ಯಕೀಯ ತಪಾಸಣೆ (Annual Health Checkup) ಸೌಲಭ್ಯವನ್ನು ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯಡಿಯಲ್ಲಿ (KASS) ಒದಗಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಎಸ್ಎಂಆರ್ 2020, ದಿನಾಂಕ: 05.09.2022 ಮತ್ತು 23.09.2025

**ಪ್ರಸ್ತಾವನೆ:**

1] ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಹಾಗೂ ಅವರ ಕುಟುಂಬದ ಅರ್ಹ ಅವಲಂಬಿತ ಸದಸ್ಯರಿಗೆ ನಗದು ರಹಿತ ವೈದ್ಯಕೀಯ ಚಿಕಿತ್ಸಾ ಸೌಲಭ್ಯಗಳನ್ನು ಕಲ್ಪಿಸಲು ರಾಜ್ಯ ಸರ್ಕಾರವು ದಿನಾಂಕ: 01.10.2025 ರಿಂದ ಜಾರಿಗೆ ತಂದಿರುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಗೆ ಒಟ್ಟು 3,76,955 ನೌಕರರು opt-in ಆಗಿದ್ದು, 23,081 ನೌಕರರು Opt-out ಆಗಿರುತ್ತಾರೆ.

2] ಆಧುನಿಕ ಜೀವನ ಶೈಲಿಯು ಒತ್ತಡದಿಂದ ಕೂಡಿರುವುದರಿಂದ ಆರೋಗ್ಯಕರ ಜೀವನ ನಡೆಸಲು ದೇಹಕ್ಕೆ ಬೇಕಾದ ವ್ಯಾಯಾಮದ ಕೊರತೆ ಹಾಗೂ ಸರ್ಕಾರಿ ನೌಕರರಿಗೆ ಇರುವ ಕೆಲಸದ ಒತ್ತಡದಿಂದಾಗಿ 40 ವರ್ಷ ವಯಸ್ಸು ಮೀರಿದ ನೌಕರರು ಸಾಮಾನ್ಯವಾಗಿ ಮಧುಮೇಹ, ರಕ್ತದೊತ್ತಡದಂತಹ ಕಾಯಿಲೆಗಳಿಂದ ಬಳಲುತ್ತಿರುವ ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದ್ದು ಇಂತಹ ಕಾಯಿಲೆಗಳಿಗೆ ತುತ್ತಾಗಿರುವ ಅರಿವು ಇಲ್ಲದೇ ಅವರು ಹೃದಯಾಘಾತ, ಪಾರ್ಶ್ವವಾಯು ಮುಂತಾದ ಅನೇಕ ರೋಗಗಳಿಗೆ ಒಳಗಾಗುತ್ತಿರುವುದು ಕಂಡುಬಂದಿರುವ ಕಾರಣ ಅವರು ಸೂಕ್ತ ಸಮಯದಲ್ಲಿ ಕೆಲವು ಅತ್ಯಗತ್ಯ ಸಾಮಾನ್ಯ ವೈದ್ಯಕೀಯ ತಪಾಸಣೆಗಳನ್ನು ಮಾಡಿಸಿಕೊಂಡಲ್ಲಿ ಆರಂಭದ ಹಂತದಲ್ಲಿ ಅವಶ್ಯಕ ಔಷದೋಪಚಾರಗಳನ್ನು ಪಡೆದು ಇಂತಹ ಗಂಭೀರ, ಅಪಾಯಕರ ಅನಾರೋಗ್ಯ ಸಮಸ್ಯೆಗಳನ್ನು ತಡೆಗಟ್ಟಿ ಆರೋಗ್ಯವನ್ನು ರಕ್ಷಿಸಿಕೊಳ್ಳಬಹುದಾಗಿರುವುದರಿಂದ ಕೇಂದ್ರ ಸರ್ಕಾರಿ ನೌಕರರಿಗೆ ಒದಗಿಸಲಾಗಿರುವ **Preventive Health Checkup**ನ ಮಾದರಿಯಲ್ಲಿ **"Annual Health Checkup"** ಸೌಲಭ್ಯವನ್ನು ರಾಜ್ಯ ಸರ್ಕಾರಿ ನೌಕರರಿಗೂ ಒದಗಿಸುವ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರ ಅಭಿಪ್ರಾಯವನ್ನು ಪಡೆದು ಪರಿಶೀಲಿಸಿ, ಕೇಂದ್ರ ಸರ್ಕಾರದ ಮಾದರಿಯಲ್ಲಿ ವಾರ್ಷಿಕ ಆರೋಗ್ಯ ತಪಾಸಣೆಯನ್ನು KASS ಯೋಜನೆಯಡಿ ನೋಂದಾಯಿತವಾಗಿರುವ (opt-in) ಸರ್ಕಾರಿ ನೌಕರರಿಗೆ ಒದಗಿಸುವುದು ಅವಶ್ಯಕತೆ ಇರುವುದನ್ನು ಸರ್ಕಾರವು ಪರಿಗಣಿಸಿ, ರಾಜ್ಯ ಸರ್ಕಾರವು ದಿನಾಂಕ: 01.10.2025 ರಿಂದ ಜಾರಿಗೆ ತಂದಿರುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಗೆ ಒಳಪಟ್ಟಿರುವ (Opt-in) ಎಲ್ಲಾ ಸರ್ಕಾರಿ ನೌಕರರಿಗೆ ವಾರ್ಷಿಕ ವೈದ್ಯಕೀಯ ತಪಾಸಣೆ ಸೌಲಭ್ಯವನ್ನು ಮಂಜೂರು ಮಾಡಲು ಸರ್ಕಾರವು ತೀರ್ಮಾನಿಸಿ, ಈ ಸಂಬಂಧ ದಿನಾಂಕ: 05.09.2022ರ ಆದೇಶದಲ್ಲಿ ನೀಡಲಾಗಿರುವ ಸೂಚನೆಗಳನ್ನು ಭಾಗಶ: ಮಾರ್ಪಡಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಎಸ್ಎಂಆರ್ 2020(ಭಾಗ-23), ದಿನಾಂಕ: 22.06.2026.**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, ದಿನಾಂಕ: 01.10.2025 ರಿಂದ ಜಾರಿಗೆ ತಂದಿರುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಗೆ ಒಳಪಟ್ಟಿರುವ (Opt-in) ಸರ್ಕಾರಿ ನೌಕರರಿಗೆ

...2

'ವಾರ್ಷಿಕ ವೈದ್ಯಕೀಯ ತಪಾಸಣೆ' ರಡಿ 40 ವರ್ಷ ಮೀರಿದ ಸರ್ಕಾರಿ ನೌಕರರು ಕ್ಯಾಲೆಂಡರ್ ವರ್ಷದಲ್ಲಿ ಒಂದು ಬಾರಿ ಈ ಕೆಳಗೆ ನಮೂದಿಸಿರುವ ಕೆಲವು ನಿರ್ದಿಷ್ಟ ಹಾಗೂ ಅತ್ಯಾವಶ್ಯಕ ವೈದ್ಯಕೀಯ ತಪಾಸಣೆಗಳನ್ನು ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯಡಿ ನಗದು ರಹಿತವಾಗಿ ಪಡೆಯಲು, ಕೆಲವೊಂದು ಷರತ್ತಿಗೊಳಪಟ್ಟು ಅವಕಾಶ ಕಲ್ಪಿಸಿ ಆದೇಶಿಸಿದೆ:-

## A. EXAMINATION

**I GENERAL EXAMINATION**

- (i) Pulse Rate
- (ii) Blood Pressure
- (iii) Temperature
- (iv) Respiratory Rate
- (v) Weight
- (vi) Body Mass Index (BMI)

**II SYSTEMIC EXAMINATION:**

- (i) Respiratory System
- (ii) Cardiovascular System (CVS)
- (iii) Abdomen
- (iv) Central Nervous System (CNS)
- (v) Locomotor System
- (vi) Dental Examination

**III EYE EXAMINATION:**

- (i) Visual Equity (Near & Distant) and Refraction
- (ii) Tonometry
- (iii) Fundus Examination

**IV ENT EXAMINATION**

**V GYNECOLOGICAL EXAMINATION (WOMEN)**

a PELVIC EXAMINATION

- (i) Local examination
- (ii) Per vaginum examination
- (iii) Per speculum

b BREAST EXAMINATION

**VI SURGICAL EXAMINATION**

## B. INVESTIGATIONS

**I HEMOGRAM**

- (i) Hemoglobin
- (ii) Total leucocyte counts
- (iii) Differential Leucocyte counts
    - a. Polymorphs
    - b. Lymphocytes
    - c. Eosinophils
    - d. Basophils
    - e. Monocytes
- (iv) Peripheral Smear

**II** **URINE EXAMINATION**
- (i) Routine
- (ii) Microscopic examination

**III** **BLOOD GLUCOSE**
- (i) Fasting
- (ii) Post-prandial
- (iii) HBA1C

**IV** **LIPID PROFILE**
- (i) Total cholesterol
- (ii) HDL cholesterol
- (iii) LDL cholesterol
- (iv) VLDL cholesterol
- (v) Triglycerides

**V** **LIVER FUNCTION TESTS**
- (i) Serum bilirubin (Total)
- (ii) Serum bilirubin (Direct)
- (iii) ALT/SGPT
- (iv) AST/SGOT
- (v) GGT
- (vi) Serum Alkaline phosphatase
- (vii) Total Protein
- (viii) Albumin and Globulin ratio

**VI** **KIDNEY FUNCTION TESTS**
- (i) Blood Urea
- (ii) Serum Creatinine
- (iii) Serum Uric Acid
- (iv) Serum Electrolytes (Sodium & Potassium)

**VII** **SERUM TSH, T3, T4**

**VIII** **SPECIAL TESTS**
- (i) For Male: PSA
- (ii) For Female: PAP Smear
- (iii) X-ray chest PA view
- (iv) ECG
- (v) Ultrasound Whole Abdomen with Prostate & Post Voiding Residual Urine Volume (Male)
- (vi) Ultrasound Whole Abdomen with Pelvis (Female)
- (vii) Mammogram (Female)

**<u>ಷರತ್ತುಗಳು:</u>**

i. ಸ್ವ-ಇಚ್ಛೆಯಿಂದ ಯೋಜನೆಗೆ ಒಳಪಡದ (Opt-out ಆದ) ಸರ್ಕಾರಿ ನೌಕರರು ಈ ಸೌಲಭ್ಯಕ್ಕೆ ಅರ್ಹರಾಗುವುದಿಲ್ಲ.

...4

ii. ವಾರ್ಷಿಕ ಆರೋಗ್ಯ ತಪಾಸಣೆ ಸರ್ಕಾರಿ ನೌಕರರಿಗೆ ಮಾತ್ರ ಅನ್ವಯವಾಗುತ್ತದೆ. ಸರ್ಕಾರಿ ನೌಕರರ ಕುಟುಂಬದ ಅವಲಂಬಿತ ಸದಸ್ಯರು ಈ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.

iii. ಈ ತಪಾಸಣೆಗಳನ್ನು ಸರ್ಕಾರಿ ಆಸ್ಪತ್ರೆ (ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳನ್ನು ಒಳಗೊಂಡಂತೆ) ಹಾಗೂ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯಡಿ (KASS) ನೋಂದಾಯಿಸಲ್ಪಟ್ಟಿರುವ ಖಾಸಗಿ ಆಸ್ಪತ್ರೆಗಳಲ್ಲಿ ಮಾತ್ರ ಪಡೆಯತಕ್ಕದ್ದು.

iv. ಈ ತಪಾಸಣೆಗಳನ್ನು ಒಂದೇ ಸಂಸ್ಥೆಯಲ್ಲಿ ಪಡೆದು ಒಂದೇ ಕ್ಲೇಮಿನಲ್ಲಿ ಅವುಗಳನ್ನು ಇತ್ಯರ್ಥಪಡಿಸತಕ್ಕದ್ದು.

v. ನಿಗದಿಪಡಿಸಿರುವ ವಾರ್ಷಿಕ ವೈದ್ಯಕೀಯ ತಪಾಸಣೆಗಳಿಗೆ ರೂ. 2000/- (ಪುರುಷ ನೌಕರರಿಗೆ) ರೂ. 2,200/- (ಮಹಿಳಾ ನೌಕರರಿಗೆ) ಸಂಚಿತ ದರಗಳನ್ನು (Consolidated Rates) ನಿಗದಿಪಡಿಸಲಾಗಿದೆ. ವಿವಿಧ ತಪಾಸಣೆಗಳಿಗೆ ಸರ್ಕಾರ ನಿಗದಿಪಡಿಸಿದ ಗರಿಷ್ಠ ಮೊತ್ತದ ಮಿತಿಗೊಳಪಟ್ಟು ಮಂಜೂರಾತಿ ನೀಡತಕ್ಕದ್ದು.

vi. ವಾರ್ಷಿಕ ವೈದ್ಯಕೀಯ ತಪಾಸಣೆಗಳನ್ನು KASS ಯೋಜನೆಯಡಿ ಅಳವಡಿಸಿಕೊಳ್ಳಲು ಹಾಗೂ ಈ ಸಂಬಂಧ ನೋಂದಾಯಿತ ಖಾಸಗಿ ಆಸ್ಪತ್ರೆಗಳೊಂದಿಗೆ ಸೂಕ್ತ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಇವರು ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 93 ವೆಚ್ಚ-12/2026, ದಿನಾಂಕ: 02.06.2026ರಲ್ಲಿ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಆರ್. ಶಿವಶಂಕರ್)
ಸರ್ಕಾರದ ಉಪ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-3)

ಸಂಕಲನಕಾರರು, ಇ- ರಾಜ್ಯಪತ್ರ, ಬೆಂಗಳೂರು.

ಇವರಿಗೆ,

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ) / (ಇ&ಆರ್ಎಸ್-ಎ)/ (ಎ&ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಅಭಿವೃದ್ಧಿ ಆಯುಕ್ತರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.

...5

4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
7. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು, ರಾಜ ಭವನ, ಬೆಂಗಳೂರು
8. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
9. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
10. ಆಯುಕ್ತರು, ಆಯುಷ್ ಇಲಾಖೆ, ಬೆಂಗಳೂರು.
11. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
12. ಆಯುಕ್ತರು, ಖಜಾನೆ-2, ಖಜಾನೆ ಆಯುಕ್ತರ ಕಛೇರಿ, 6ನೇ ಮಹಡಿ, ಕೆ.ಪಿ.ಟಿ.ಸಿ.ಎಲ್. ಅರಮನೆ ರಸ್ತೆ, ಬೆಂಗಳೂರು.
13. ಯೋಜನಾ ನಿರ್ದೇಶಕರು, HRMS 2.0, ಕೆಪಿಸಿಎಲ್ ಹಸಿರು ಕಟ್ಟಡ, ಬೆಂಗಳೂರು.
14. ಎಲ್ಲಾ ಇಲಾಖಾ ಮುಖ್ಯಸ್ಥರು.
15. ಎಲ್ಲಾ ಪ್ರಾದೇಶಿಕ ಆಯುಕ್ತರು.
16. ಎಲ್ಲಾ ಜಿಲ್ಲಾಧಿಕಾರಿಗಳು/ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
17. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನಂ.10, ಕೌಟಿಲ್ಯ ಮಾರ್ಗ, ಚಾಣಕ್ಯಪುರಿ, ನವದೆಹಲಿ- 110011.
18. ರಾಜ್ಯಾಧ್ಯಕ್ಷರು, ಕರ್ನಾಟಕ ಸರ್ಕಾರಿ ನೌಕರರ ಸಂಘ, ಕಬ್ಬನ್ ಪಾರ್ಕ್, ಬೆಂಗಳೂರು.
19. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-12)/ ಸೇವೆಗಳು-1 ವಿಧಾನಸೌಧ.
20. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ).
21. ಶಾಖಾ ರಕ್ಷಾ ಕಡತ/ ಬಿಡಿ ಪ್ರತಿಗಳು.

ಈ ಆದೇಶವನ್ನು ಸರ್ಕಾರದ ಅಧಿಕೃತ ಜಾಲತಾಣ https://dpar.karnataka.gov.in ಮತ್ತು https://kass.karnataka.gov.inರಲ್ಲಿ ವೀಕ್ಷಿಸಬಹುದು.